# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 278 | Pages. 2 | Date: 24-09-2025, WEDNESDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 278 - ಪುಟಗಳು : 2 24-09-2025 ಬುಧವಾರ | Ph: 8762954248 | ದರ : ₹1


# ಜನರ ಜೀವನಮಟ್ಟ ಸುಧಾರಣೆ ಗುರಿಯಾಗಲಿ

## ಕಾಟಾಚಾರದ ಕೆಲಸ ಮಾಡಬೇಡಿ | ಅಧಿಕಾರಿಗಳಿಗೆ ಸಚಿವರ ಕಟ್ಟಪ್ಪಣೆ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಖರ್ಚು ಮಾಡುವುದಷ್ಟೇ ಅಭಿವೃದ್ಧಿಯಲ್ಲ. ಜನರಿಗೆ ಸೌಲಭ್ಯಗಳು ತಲುಪಬೇಕು ಆ ಮೂಲಕ ಬಡವರ ಜೀವನಮಟ್ಟ ಸುಧಾರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ಇಲಾಖೆ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. ಬೆಳಿಗ್ಗೆ 11 ಗಂಟೆಗೆ ಶುರುವಾದ ಸಭೆ ರಾತ್ರಿ 8 ಗಂಟೆ ವರೆಗೆ ನಡೆಯಿತು.

ಭೌತಿಕ-ಹಣಕಾಸು ಅಂಕಿ-ಅಂಶಗಳಷ್ಟೇ ಅಭಿವೃದ್ಧಿಯೇ. ಬಂದ ಅನುದಾನ ಖರ್ಚು ಮಾಡುವುದನ್ನೇ ಅಭಿವೃದ್ಧಿ ಎಂದುಕೊಂಡಿದ್ದೀರಾ.. ನಾಲ್ಕು ಫೋಟೋ ತೆಗೆಸಿಕೊಂಡು ಕಾರ್ಯಕ್ರಮ ಮಾಡಿದ್ದೇವೆ ಎಂದು ಹೇಳುತ್ತೀರಿ. ನಾನು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಿ, ಸುತ್ತಿ ಬಳಸಿ ಹಾರಿಕೆ ಉತ್ತರ ಕೊಡುವುದು ಬೇಡ. ಗಿರಕಿ ಹೊಡೆಸಲು ಹೋದರೆ ನನಗೂ ಒಳ್ಳೆಯದಲ್ಲ, ನಿಮಗೂ ಒಳ್ಳೆಯದಲ್ಲ ಎಂದು ಎಚ್ಚರಿಕೆ ನೀಡಿದರು.

ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಇದ್ದರೆ ಆಯ್ದ ಇಲಾಖೆ, ಆದ್ಯತೆಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬಹುದು. ಇಲ್ಲದಿದ್ದರೆ ಕೆಡಿಪಿ ಸಭೆ ಕೂಡ ತೌಡು ಕುಟ್ಟುವ ಕಾರ್ಯಕ್ರಮವಾಗುತ್ತದೆ. ಸರ್ಕಾರದ ಕಾರ್ಯಕ್ರಮಗಳಿಂದ ಜನರಿಗೆ ಆಗುತ್ತಿರುವ ಪ್ರಯೋಜನಗಳೇನು. ಜನರ ಜೀವನದಲ್ಲಿ ಸಾಸಿವೆ ಕಾಳಿನಷ್ಟಾದ್ರೂ ಲಾಭವಾಗಿದೆಯೇ ಎಂಬ ಮಾಹಿತಿಯಷ್ಟೇ ನನಗೆ ಮುಖ್ಯ. ಪುಸ್ತಕದಲ್ಲಿರುವ ಅಂಕಿ-ಅಂಶಗಳು ನನಗೆ ಬೇಕಿಲ್ಲ. ತೆರಿಗೆದಾರ ಜನರಿಗೆ ಇದರಿಂದ




ಎಷ್ಟು ಪ್ರಯೋಜನವಾಯ್ತು.. ಲಾಭವಾಯ್ತು ಎಂಬ ಕಲ್ಪನೆಯೇ ಅಧಿಕಾರಿಗಳಿಗೆ ಇಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

### ಪಡಿತರ ಏಕೆ ಪಡೆದಿಲ್ಲ

ಜಿಲ್ಲೆಯಲ್ಲಿ 18 ಸಾವಿರ ಕುಟುಂಬಗಳ ಹೆಸರಲ್ಲಿ ಬಿಪಿಎಲ್ ಪಡಿತರ ಚೀಟಿ ಇದ್ದರೂ ಸತತ ಮೂರು ತಿಂಗಳು ಪಡಿತರವನ್ನು ಏಕೆ ಪಡೆದಿಲ್ಲ, ಅಧಿಕಾರಿಗಳು ಏಕೆ ಸ್ಥಳ ಪಡಿಶೀಲನೆ ನಡೆಸಿಲ್ಲ. ಇಷ್ಟು ಜನರು ಪಡಿತರ ಪಡೆದುಕೊಳ್ಳದೇ ಇರುವುದಕ್ಕೆ ಕಾರಣವೇನು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್‌ಕುಮಾರ್ ಸಂಗಾವಿ ಅವರನ್ನು ಪ್ರಶ್ನಿಸಿದರು.

### ಇಂಗ್ಲಿಷ್ ವ್ಯಾಮೋಹ ದೂರವಾಗಲಿ

ಕಲಿಕೆಯಲ್ಲಿ ಹಿಂದುಳಿದ ಮಗು ಏಕಾಏಕಿ ಹತ್ತನೇ ತರಗತಿಗೆ ಬಂದಾಗ ಆ ಶಾಲೆಯ ಫಲಿತಾಂಶದಲ್ಲಿ ಇಳಿಕೆಯಾಗುವುದು ಸಾಮಾನ್ಯ. 8 ಮತ್ತು 9ನೇ ತರಗತಿಯಲ್ಲಿದ್ದಾಗ ಮಗುವಿಗೆ ಟಿಸಿ ಕೊಟ್ಟು ಕಳುಹಿಸುವ ಶಿಕ್ಷಣ ಸಂಸ್ಥೆಗಳನ್ನು ಗುರುತಿಸಿ ಅಂತವರ ಪರವಾನಗಿ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕೆಂದು ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಇಂಗ್ಲಿಷ್ ಮಾಧ್ಯಮ ಶಾಲೆಗೆ ಮಕ್ಕಳನ್ನು ಸೇರಿಸಬೇಕೆಂಬ ವ್ಯಾಮೋಹ ಪೋಷಕರಿಗೆ ಹೆಚ್ಚಾಗಿದೆ. ಗ್ರಾಮ ಪಂಚಾಯಿತಿಗೊಂದು ಮಾದರಿ ಶಾಲೆ ತೆರೆಯಲು ಸರ್ಕಾರ ಮುಂದಾಗಿದೆ. ಅದಕ್ಕಾಗಿ 8 ಕೋಟಿ ರೂ. ಅನುದಾನ ಶಿಕ್ಷಕರು, ಸೌಕರ್ಯಗಳನ್ನು ಕಲ್ಪಿಸಬೇಕು. ಇಂಗ್ಲಿಷ್ ಮಾಧ್ಯಮ ಶಾಲೆ ತೆರೆದರೆ ಕನ್ನಡ ಮಾಧ್ಯಮ ಶಾಲೆಗಳಿಗೆ ದಾಖಲಾತಿ ಕುಸಿಯುತ್ತದೆ. ಆಗ ಅಲ್ಲಿನ ಶಿಕ್ಷಕರು ಎಲ್ಲಿಗೆ ಹೋಗಬೇಕೆಂದು ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಅರುಣ್, ಅವರೆಲ್ಲ ಬೇರೆ ಊರುಗಳಿಗೆ ವಲಸೆ ಹೋಗಿದ್ದಾರೆ ಎಂದು ಹಾರಿಕೆ ಉತ್ತರ ನೀಡಿದರು. ಇದರಿಂದ ಅಸಮಾಧಾನಗೊಂಡ ಸಚಿವರು, 18 ಸಾವಿರ ಕುಟುಂಬಗಳು ಒಮ್ಮೆಗೆ ವಲಸೆ ಹೋಗಲು ಹೇಗೆ ಸಾಧ್ಯ. ನಾವು ಕೇಳುತ್ತಿರುವುದೇನು..ನೀವು ನೀಡುತ್ತಿರುವ ಉತ್ತರವೇನು ಎಂದು ತರಾಟೆಗೆ ತೆಗೆದುಕೊಂಡರು.

### ಸರ್ಕಾರಿ ಶಾಲೆ ದಾಖಲೆ ಸರಿಪಡಿಸಿ

ಕಾಲುವೆ ಹಾಗೂ ರಸ್ತೆ ಹೊರತುಪಡಿಸಿ ಉಳಿದೆಲ್ಲ ಆಸ್ತಿ ಪೋಡಿಯಾಗಬೇಕೆನ್ನುವುದು ಸರ್ಕಾರದ ಧ್ಯೇಯವಾಗಿದ್ದು ಸರ್ಕಾರಿ ಶಾಲೆಗಳ ದಾಖಲಾತಿ ಸರಿಪಡಿಸಿಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸೂಚಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್. ಬಲರಾಮ್ ಅವರ ಜಿಲ್ಲೆಯ 2396 ಶಾಲೆಗಳ ಪೈಕಿ 1368 ಶಾಲೆಗಳು ನಿಖರ ದಾಖಲಾತಿ ಹೊಂದಿದ್ದು 1031 ಶಾಲೆಗಳಿಗೆ ದಾಖಲಾತಿಗಳೇ ಇಲ್ಲವೆಂಬ ಉತ್ತರಕ್ಕೆ ಪ್ರತಿಕ್ರಿಯಿಸಿದ ಸಚಿವರು, ಲ್ಯಾಂಡ್ ಬೀಟ್ ಆ್ಯಪ್‌ನಡಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ನಂತರ ತಹಶೀಲ್ದಾರ್ ಮೂಲಕ ಪ್ರಕ್ರಿಯೆ ಪ್ರಾರಂಭಿಸಬಹುದು. ಖಾತೆ ಆಗಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಆರ್‌ಟಿಸಿಗೆ ಕ್ರಮ ವಹಿಸಬೇಕು. ನಂತರ ಪೋಡಿ ಮಾಡಿದರೆ ಹೊಸ ಸರ್ವೆ ನಂಬರ್ ದೊರೆಯುತ್ತದೆ. ಜಿಲ್ಲೆಯ ಯಾವುದಾದರೂ ಹೋಬಳಿಯಿಂದ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಡಿಡಿಪಿಐ ಕೆ.ಎನ್. ಬಲರಾಮ್ ಮಾತನಾಡಿ, ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ 72 ಸಾವಿರ ಇದ್ದು, ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆ ಸೇರಿ 2 ಲಕ್ಷ ಮಕ್ಕಳು ಪ್ರವೇಶ ಪಡೆದಿದ್ದಾರೆ. ಎಸ್ಎಸ್ಎಲ್‌ಸಿಯಲ್ಲಿ 22 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಬಾರಿ ಫಲಿತಾಂಶ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

1 ರಿಂದ 5 ವಿದ್ಯಾರ್ಥಿಗಳಿರುವ 362, 5 ರಿಂದ 10 ಮಕ್ಕಳಿರುವ 331, 11 ರಿಂದ 20 ಮಕ್ಕಳಿರುವ 675 ಹಾಗು 21 ರಿಂದ 30 ವಿದ್ಯಾರ್ಥಿಗಳಿರುವ 300 ಸರ್ಕಾರಿ ಶಾಲೆಗಳಿವೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಪ್ರೌಢ ಶಾಲೆಯೊಂದರಲ್ಲಿ ಕೇವಲ ನಾಲ್ವರು ವಿದ್ಯಾರ್ಥಿಗಳಿದ್ದು ಮೂವರು ಶಿಕ್ಷಕರು ಪಾಠ ಮಾಡುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು.

## ಸಮೀಕ್ಷೆಯಲ್ಲಿ ಸವಿತಾ ಸಮಾಜ ಎಂದೇ ಬರೆಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ ಸವಿತಾ ಸಮಾಜ ಬಾಂಧವರು ಜಾತಿ ಕಾಲಂನಲ್ಲಿ ಸವಿತಾ ಎಂದೇ ಬರೆಸಬೇಕೆಂದು ಸವಿತಾ ಸಮಾಜ ಜಿಲ್ಲಾಧ್ಯಕ್ಷ ರವಿಕುಮಾರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಸವಿತಾ ಸಮಾಜದಲ್ಲಿ 26 ಒಳಪಂಗಡಗಳಿವೆ. ಹಾಸನದಲ್ಲಿ 23 ಸಾವಿರ ಜನಸಂಖ್ಯೆ ಇರುವ ಅಂದಾಜಿದೆ. ಈಗ ನಡೆಯುತ್ತಿರುವ ಸಮೀಕ್ಷೆ ವೇಳೆ ಸಮಾಜ ಬಾಂಧವರು ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಸವಿತಾ ಹಾಗೂ ಉಪಜಾತಿಯಲ್ಲಿ ತಮ್ಮ ಅನಿಸಿಕೆ ಅನುಸಾರ ಬರೆಸಬೇಕು ಎಂದರು.

ಕಾಲಂ ನಂ. 59ರಲ್ಲಿ ಜಾತಿ ಆಧಾರದ ಮೇಲೆ ಭೇದ ಭಾವ ಅನುಭವಿಸಿದ್ದೀರಾ ಎಂಬ ಪ್ರಶ್ನೆಗೆ ಹೌದು ಎಂದೇ ನಮೂದಿಸಬೇಕು. ಸರ್ಕಾರದ ಈ ಸಮೀಕ್ಷೆಯಿಂದ ಸಮಾಜದ ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿ ಬಹಿರಂಗಗೊಳ್ಳಲಿದೆ. ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಸಮಗ್ರ ಮಾಹಿತಿಯನ್ನು ನೀಡುವುದು ಅತ್ಯವಶ್ಯ ಎಂದರು.

ನಮ್ಮ ಸಮಾಜದ ಎಲ್ಲಾ ವರ್ಗಗಳ ಬಂಧುಗಳು ಸಮೀಕ್ಷಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಕ್ರಿಯವಾಗಿ ಪಾಲ್ಗೊಂಡು, ಒಗ್ಗಟ್ಟು ತೋರಿಸುವಂತೆ ಕರೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮೋಹನ್, ಉಪಾಧ್ಯಕ್ಷ ಕುಮಾರ್, ಸಂಘಟನಾ ಕಾರ್ಯದರ್ಶಿ ದೇವೇಂದ್ರ, ಮಂಗಳವಾದ್ಯ ಕಲಾವಿದರ ಸಂಘದ ಜಿಲ್ಲಾಧ್ಯಕ್ಷ ಸಂಜೀವ್ ಕುಮಾರ್, ಕಾರ್ಯದರ್ಶಿ ಶ್ರೀಕಾಂತ್, ಸಹಕಾರ್ಯದರ್ಶಿ ಮಂಜುನಾಥ ಮತ್ತು ತಾಲ್ಲೂಕು ಅಧ್ಯಕ್ಷ ವೆಂಕಟೇಶ್ ಹಾಜರಿದ್ದರು.

## ಗಣಪತಿ ಪೆಂಡಾಲ್‌ನಲ್ಲಿ ಅನ್ನ ಸಂತರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಪೆಂಡಾಲ್ ಗಣಪತಿ ಸೇವಾ ಸಂಸ್ಥೆಯಿಂದ 71ನೇ ಗಣೇಶೋತ್ಸವ ಅಂಗವಾಗಿ ಮಂಗಳವಾರ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಸಮಿತಿ ಅಧ್ಯಕ್ಷ ಡಾ. ಹೆಚ್. ನಾಗರಾಜು ಮಾತನಾಡಿ, ಆ. 27 ರಿಂದ ಸೆ. 20ರ ವರೆಗೆ ಗಣೇಶ ಉತ್ಸವ ಅರ್ಥಪೂರ್ಣವಾಗಿ ನೆರವೇರಿತು. ನಿತ್ಯ ಪೂಜಾ ಕೈಂಕರ್ಯ, ಮಧ್ಯಾಹ್ನ ಸಾರ್ವಜನಿಕರಿಗೆ ಪ್ರಸಾದ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದೆ.

ಶನಿವಾರ ಗಣಪತಿ ವಿಸರ್ಜನಾ ಮಹೋತ್ಸವ ಅರ್ಥಪೂರ್ಣವಾಗಿ ನೆರವೇರಿದೆ. 30ಕ್ಕೂ ಹೆಚ್ಚು ಕಲಾತಂಡಗಳು ಮೆರವಣಿಗೆಯ ಆಕರ್ಷಣೆಯಾಗಿದ್ದವು ಎಂದರು.



ಸಮಿತಿ ಕಾರ್ಯದರ್ಶಿ ಚನ್ನವೀರಪ್ಪ ಮಾತನಾಡಿ, 71 ವರ್ಷಗಳಿಂದ ಅರ್ಥಪೂರ್ಣವಾಗಿ ಗಣೇಶ ಉತ್ಸವ ಮಾಡಿಕೊಂಡು ಬರಲಾಗಿದೆ. ವಿವಿಧ ಸ್ಪರ್ಧೆ ಏರ್ಪಡಿಸಲಾಗುತ್ತಿದೆ. ಸಾರ್ವಜನಿಕರಿಂದಲೂ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ, ಉಪ ಮೇಯರ್ ಹೇಮಾಲತಾ ಕಮಲ್ ಕುಮಾರ್, ಗಣಪತಿ ಸೇವಾ ಸಮಿತಿ ಧರ್ಮದರ್ಶಿಗಳಾದ ಲಲಾಟ್ ಮೂರ್ತಿ, ಬೂದೇಶ್, ಹೆಚ್.ಟಿ. ಶೇಖರ್, ಹೆಚ್.ಎಸ್. ಅನಂತನಾರಾಯಣ, ಎನ್.ಎಸ್. ಶಂಕರರಾವ್, ಹೆಚ್.ಎಂ.ಟಿ. ಸುರೇಶ್ ಕುಮಾರ್, ಎಂ.ಕೆ. ಕಮಲ್ ಕುಮಾರ್, ಹೆಚ್.ಡಿ. ದೀಪಕ್, ಲೀಲಾಕುಮಾರ್ ಇತರರಿದ್ದರು.

## ಸ್ಕಾಲರ್ಸ್ ಶಿಕ್ಷಕರಿಂದ ನವರಾತ್ರಿ ದ್ವಿತೀಯ ದಿನಾಚರಣೆ



ಹಾಸನ: ಸ್ಕಾಲರ್ಸ್ ಇಂಟರ್‌ನ್ಯಾಷನಲ್ ಶಾಲೆಯ ಶಿಕ್ಷಕರು ನವರಾತ್ರಿಯ ದ್ವಿತೀಯ ದಿನವನ್ನು ಸಂತೋಷ ಹಾಗೂ ಭಕ್ತಿಭಾವದಿಂದ ಆಚರಿಸಿದರು. ನವರಾತ್ರಿಯ ಎರಡನೇ ದಿನವು ಬ್ರಹ್ಮಚಾರಿಣಿ ದೇವಿಗೆ ಸಮರ್ಪಿತವಾಗಿದ್ದು, ತಪಸ್ಸು, ಜ್ಞಾನ ಮತ್ತು ಶಕ್ತಿಯ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಒಟ್ಟಾಗಿ ಸೇರಿ ಪ್ರಾರ್ಥನೆ ಸಲ್ಲಿಸಿ ಹಬ್ಬದ ಸಂಭ್ರಮ ಹಂಚಿಕೊಂಡರು. ಶಾಲೆಯ ಕಾರ್ಯದರ್ಶಿ ಮಮತಾ ಅವರು ನವರಾತ್ರಿ ಹಬ್ಬದ ಕುರಿತು ಮಾಹಿತಿ ಹಂಚಿಕೊಂಡರು.

# ರಾಜ್ಯದ 7 ಸಾವಿರ ನಿರುದ್ಯೋಗಿಗಳಿಗೆ ವರವಾದ ಆಶಾ ದೀಪ


## ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ | ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪರಿಶಿಷ್ಟ ಜಾತಿ ಹಾಗೂ ಪಂಗಡದ ಯುವಕ-ಯುವತಿಯರಿಗೆ ಉದ್ಯೋಗ ಕೊಟ್ಟರೆ ಅಂತಹ ಉದ್ಯಮಿಗಳಿಗೆ ಎರಡು ವರ್ಷ ಶೇ. 50 ರಷ್ಟು ಸಂಬಳವನ್ನು ಕಾರ್ಮಿಕ ಇಲಾಖೆಯೇ ನೀಡಲು ಆಶಾ ದೀಪ ಯೋಜನೆ ಜಾರಿಗೊಳಿಸಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗು ಇಲಾಖೆ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆಶಾ ದೀಪ ಯೋಜನೆಯಡಿ ರಾಜ್ಯದ 7 ಸಾವಿರ ಮಕ್ಕಳು ಫಲಾನುಭವಿಗಳಾಗಿದ್ದಾರೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಳೆದ ಎರಡೂವರೆ ವರ್ಷಗಳಲ್ಲಿ 54 ಕೋಟಿ ರೂ. ಮೊತ್ತದ ಸೌಲಭ್ಯ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರ ಅಸಂಘಟಿತ ಕಾರ್ಮಿಕರ ಸಾಮಾಜಿಕ




ಭದ್ರತಾ ಮಂಡಳಿಯನ್ನು ರಚಿಸಿದೆ. ಈ ಮಂಡಳಿಯು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಸೇರಿ ಹಲವು ಸಾಮಾಜಿಕ ಭದ್ರತಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಯೋಜನೆಯಡಿ 101 ಅಸಂಘಟಿತ ವರ್ಗಗಳ ಸುಮಾರು 30 ರಿಂದ 40 ಲಕ್ಷ ಕಾರ್ಮಿಕರನ್ನು ಗುರುತಿಸಿ ಉಚಿತವಾಗಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 25,45,607 ಕಾರ್ಮಿಕರು ನೋಂದಣಿಯಾಗಿದ್ದು, ಜಿಲ್ಲೆಯಲ್ಲಿ 45,262 ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕರಿಗೆ ಸಂಬಂಧಿಸಿದ ಐದು ಮಹತ್ವದ ಯೋಜನೆ ಜಾರಿಗೊಳಿಸಿದೆ. ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ನೀಡಲಾಗುತ್ತಿದ್ದು ಜಿಲ್ಲೆಯಲ್ಲಿ ಇದುವರೆಗೆ 3 ಅಪಘಾತ ಪ್ರಕರಣಗಳಲ್ಲಿ 3.24 ಕೋಟಿ ರೂ. ಪರಿಹಾರ ಮತ್ತು 42 ವಿದ್ಯಾರ್ಥಿಗಳಿಗೆ 4.20 ಕೋಟಿ ರೂ. ಶೈಕ್ಷಣಿಕ ಧನಸಹಾಯ ನೀಡಲಾಗಿದೆ ಎಂದು ಹೇಳಿದರು.

ಇ-ಕಾಮರ್ಸ್ ವಲಯದ ಗಿಗ್ ಕಾರ್ಮಿಕರಿಗೆ 2 ಲಕ್ಷ ರೂ. ಅಪಘಾತ ಪರಿಹಾರ ಮತ್ತು 2 ಲಕ್ಷ ರೂ. ಜೀವ ವಿಮಾ ಸೌಲಭ್ಯ ಒದಗಿಸಲಾಗುತ್ತಿದೆ. ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ 2 ಲಕ್ಷ ರೂ. ಅಪಘಾತ ಪರಿಹಾರ ಮತ್ತು 1 ಲಕ್ಷ ರೂ. ವರೆಗೆ ವೈದ್ಯಕೀಯ ಸೌಲಭ್ಯ ಒದಗಿಸುತ್ತದೆ.

ಕರ್ನಾಟಕ ಸಿನಿಮಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದ ಕಾರ್ಮಿಕರ ಸುಂಕ ಅಧಿನಿಯಮ-2024ರ ಅನುಸಾರ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯ ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢೀಕರಿಸಲು ಅಧಿಸೂಚನೆ ಹೊರಡಿಸಲಾಗಿದೆ ಎಂದು ವಿವರಿಸಿದರು.

ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಕಾರ್ಮಿಕರ ಜೀವನಕ್ಕೆ ಭದ್ರತೆಯನ್ನು ನೀಡುವ ಕೆಲಸವನ್ನು ಸಚಿವ ಸಂತೋಷ್ ಲಾಡ್ ಮಾಡುತ್ತಿದ್ದಾರೆ. ರಾಷ್ಟ್ರ ಅಭಿವೃದ್ಧಿಯಾಗಬೇಕೆಂದರೆ ಕಾರ್ಮಿಕರು ಸಂತೋಷದಿಂದ ಇರಬೇಕು. ಅದನ್ನು ಸಚಿವರು ಅರಿತಿದ್ದಾರೆ.

ಅವರು ಒಳ್ಳೆಯ ಕೆಲಸಗಾರ ಮಾತ್ರವಲ್ಲದೆ ಉತ್ತಮ ಜ್ಞಾನಿಯೂ ಆಗಿದ್ದಾರೆ. ವಿರೋಧ ಪಕ್ಷಗಳಿಗೆ ತಕ್ಕ ಪ್ರತ್ಯುತ್ತರ ನೀಡುವ ಮೂಲಕ ಜನಮಾನಸದಲ್ಲಿ ಉಳಿದಿದ್ದಾರೆ ಎಂದರು.

ಸಂತೋಷ್ ಲಾಡ್ ಅವರ ದೂರದೃಷ್ಟಿ, ಕಾಳಜಿ ಮೆಚ್ಚುವಂತಹುದು. ಕಾರ್ಮಿಕರ ಮಕ್ಕಳ ವ್ಯಾಸಂಗಕ್ಕಾಗಿ ವಸತಿ ನಿಲಯ ತಂದಿದ್ದಾರೆ. ಅರಸೀಕೆರೆಯಲ್ಲಿ 32 ಕೋಟಿ ರೂ. ಕೋಟಿ ರೂ. ವೆಚ್ಚದ ಹಾಸ್ಟೆಲ್ ತಲೆ ಎತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲೂ ವಸತಿ ನಿಲಯ ತೆರೆಯಲಾಗುವುದೆಂದು ಭರವಸೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಕಾರ್ಮಿಕರ ಏಳಿಗಾಗಿ ದುಡಿಯುವ ಸಚಿವ ಸಂತೋಷ್ ಲಾಡ್ ಅವರು ಒಬ್ಬ ರಾಜಕಾರಣಿ ಮಾತ್ರವಲ್ಲದೆ ಹೃದಯವಂತ ವ್ಯಕ್ತಿಯಾಗಿದ್ದಾರೆಂದರು.

ಶಾಸಕ ಹೆಚ್.ಪಿ. ಸ್ವರೂಪ್ ಅವರು ಮಾತನಾಡಿ, ಕಾರ್ಮಿಕರು ಶ್ರದ್ಧೆಯಿಂದ ಕೆಲಸ ಮಾಡುತ್ತೀರಿ. ಐತಿಹಾಸಿಕ ಯೋಜನೆಯನ್ನು ಸರ್ಕಾರ ರೂಪಿಸಿದೆ. ಎಲ್ಲರೂ ಅದರ ಪ್ರಯೋಜನ ಪಡೆಯಬೇಕೆಂದು ಹೇಳಿದರು.

ಕಡೂರು ಶಾಸಕ ಆನಂದ್, ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಿಸಿನ್, ಕಾರ್ಮಿಕ ಇಲಾಖೆ ಆಯುಕ್ತ ಗೋಪಾಲಕೃಷ್ಣ, ರವಿಕುಮಾರ್, ಸುಭಾಷ್, ಜಿಲ್ಲಾ ಕಾರ್ಮಿಕ ಅಧಿಕಾರಿ ಯಮುನಾ ಮತ್ತಿತರರಿದ್ದರು.

## ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ. ಶಿವಣ್ಣ ನಿಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ. ಶಿವಣ್ಣ (94) ಮಂಗಳವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಹಲವು ದಿನಗಳಿಂದ ಆಸ್ಪತ್ರೆಯಲ್ಲಿದ್ದರು. ಮೃತರಿಗೆ ಪತ್ನಿ ಸುಶೀಲಮ್ಮ, ಇಬ್ಬರು ಗಂಡು ಮಕ್ಕಳು ಇದ್ದಾರೆ. ಬುಧವಾರ ಚನ್ನರಾಯಪಟ್ಟಣ ತಾಲ್ಲೂಕಿನ ಬಳದರೆ ಸಮೀಪದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮದ ಹೆಚ್.ಎಂ.ಶಿವಣ್ಣ ಅವರು, ಸ್ವಾತಂತ್ರ ಹೋರಾಟದ ವೇಳೆ ಪರಿಚಿತರಾದ ಮಾಜಿ ಶಾಸಕಿ ದಿ. ಯಶೋಧರಾ ದಾಸಪ್ಪ ಅವರೊಂದಿಗೆ ಹಾಸನಕ್ಕೆ ಆಗಮಿಸಿ, ಕಳೆದ ಏಳು



ದಶಕಗಳಿಂದ ಜಿಲ್ಲೆಯಲ್ಲೇ ನೆಲೆಸಿದ್ದರು. 1933 ಮಾರ್ಚ್1 ರಂದು ಹೆಚ್. ಮಂಟೇಗೌಡ ಮತ್ತು ತಿಮ್ಮಮ್ಮ ಅವರ ಪುತ್ರರಾಗಿ ಜನಿಸಿದ ಶಿವಣ್ಣ ಅವರು, ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಗುಂಡ್ಲುಪೇಟೆಯಲ್ಲಿ ಪಡೆದರು. ಇಂಟರ್ ಮೀಡಿಯೇಟ್ ಅನ್ನು ಮೈಸೂರಿನ ಯುವರಾಜ ಕಾಲೇಜಿನಲ್ಲಿ ಮುಗಿಸಿದ ನಂತರ ಮಹಾರಾಜ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರೆಸಿ ಬಿಎ ಪದವಿಯನ್ನು ಪಡೆದರು.

ಮಹಾತ್ಮ ಗಾಂಧೀಜಿ ಅವರ ಮಾಡು ಇಲ್ಲವೆ ಮಡಿ ಎಂಬ ಘೋಷವಾಕ್ಯದಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಮೈಸೂರಿನ ಹೆಚ್.ಸಿ.ದಾಸಪ್ಪ ಮತ್ತು ಯಶೋಧರಾ ದಾಸಪ್ಪ ಅವರೊಡನೆ ಜೈಲು ವಾಸವನ್ನು ಅನುಭವಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ ಅವರ ನಿಧನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸೇರಿ ಹಲವು ಸಂಘ-ಸಂಸ್ಥೆಗಳು ಸಂತಾಪ ಸೂಚಿವೆ. ಮಹಾತ್ಮಾ ಗಾಂಧೀಜಿ ಅವರ ಕಟ್ಟಾ ಅನುಯಾಯಿಯಾಗಿದ್ದ ಶಿವಣ್ಣ ಅವರು ನನಗೆ ಹಲವು ದಶಕಗಳಿಂದ ಪರಿಚಿತರು. ಇಳಿವಯಸ್ಸಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡು ಪ್ರಾಮಾಣಿಕ ಸೇವೆ ಮಾಡಿದ್ದನ್ನು ನಾನು ಹತ್ತಿರದಿಂದ ಬಲ್ಲವನಾಗಿದ್ದಾರೆ. ಹಿರಿಯ ವ್ಯಕ್ತಿಯೊಬ್ಬರ ನಿಧನದಿಂದ ಸಮಾಜ ಒಬ್ಬ ಪ್ರಾಮಾಣಿಕ ವ್ಯಕ್ತಿ ಹಾಗು ಮಾರ್ಗದರ್ಶಕರನ್ನು ಕಳೆದುಕೊಂಡಿದೆ ಎಂದು ಕಂಬನಿ ಮಿಡಿದಿದ್ದಾರೆ.

ಆದಿಚುಂಚನಗಿರಿ ಹಾಸನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಸಂತಾಪ ವ್ಯಕ್ತಪಡಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಬದುಕನ್ನು ಸಮರ್ಪಿಸಿಕೊಂಡ ಶಿವಣ್ಣ ಅವರು ಸಮಾಜಮುಖಿ ಚಟುವಟಿಕೆಗಳಲ್ಲಿಯೂ ಸಕ್ರಿಯರಾಗಿದ್ದರು. ಅವರ ಅಗಲಿಕೆಯಿಂದ ಸಮಾಜವು ಹೋರಾಟಗಾರರೊಬ್ಬರನ್ನು ಕಳೆದುಕೊಂಡಿದೆ. ಶಿವಣ್ಣನವರು ಸಮುದಾಯಕ್ಕೆ ನೀಡಿದ ಸೇವೆ ಪರಿಗಣಿಸಿ ಚುಂಚಶ್ರೀ ಪ್ರಶಸ್ತಿ ನೀಡಲಾಗಿತ್ತು. ಅದರ ಬದುಕು ಇಂದಿನವರಿಗೆ ಮಾದರಿ ಎಂದು ಸ್ಮರಿಸಿದ್ದಾರೆ.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಅರೇಹಳ್ಳಿಯ ರೋಟರಿ ಶಾಲೆ ಆವರಣದಲ್ಲಿ ರೋಟರಿ ಜಿಲ್ಲಾ ಗವರ್ನರ್ ಕೆ. ಪಾಲಾಕ್ಷ ಹಾಗು ರೇಖಾ ಭೇಟಿ ನೀಡಿ ವನಮೋತ್ಸವ ಅಂಗವಾಗಿ ಗಿಡ ನೆಟ್ಟರು. ರೋಟರಿ ಕ್ಲಬ್ ಅಧ್ಯಕ್ಷ ಎಂ.ಎಸ್.ಪ್ರಸನ್ನ, ಕಾರ್ಯದರ್ಶಿ ಎಂ.ಪ್ರವೀಣ್,, ಶಾಲಾ ಅಧ್ಯಕ್ಷ ನವೀನ್, ಉಪಾಧ್ಯಕ್ಷ ಡಬ್ಲ್ಯೂ. ಆರ್. ಪಿಂಟೊ, ಕಿಶೋರ್, ಶಾಲಾ ಕಾರ್ಯದರ್ಶಿ ಚೇತನ್, ಪ್ರಕಾಶ್, ಬಿ.ಎಂ. ಶರತ್ ಇತರರಿದ್ದರು.

# ಉಚಿತ ಬಸ್ ಬೇಡ ಬಸ್ ವ್ಯವಸ್ಥೆ ಕಲ್ಪಿಸಿ

## ನೀಲಗಿರಿ ಗ್ರಾಮಸ್ಥರ ಮನವಿ | ಶಾಲೆ ತೊರೆಯುತ್ತಿರುವ ಮಕ್ಕಳು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಪಾಲಕರ ಆಶಯ ಹಾಗೂ ಉನ್ನತ ಶಿಕ್ಷಣ ಪಡೆದು ಉತ್ತಮ ಸ್ಥಾನಕ್ಕೇರಬೇಕೆಂಬ ವಿದ್ಯಾರ್ಥಿಗಳ ಕನಸಿಗೆ ಸಾರಿಗೆ ವ್ಯವಸ್ಥೆ ತಣ್ಣೀರೆರಚುತ್ತಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾದರೂ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಿಕೊಡಿ ಎಂದು ಅರಸೀಕೆರೆ ತಾಲ್ಲೂಕಿನ ನೀಲಗಿರಿ ಕಾವಲು ಗ್ರಾಮಸ್ಥರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ನೀಲಗಿರಿ ಕಾವಲು ಗ್ರಾಮಕ್ಕೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೇ ವಿದ್ಯಾರ್ಥಿಗಳು, ರೋಗಿಗಳು ಕಿಲೋ ಮೀಟರ್‌ಗಟ್ಟಲೆ ನಡೆದು ಸಾಗಿ ಬಸ್ ಹತ್ತಬೇಕಾದ ಸ್ಥಿತಿ ಇದೆ. ಉತ್ತಮ ರಸ್ತೆ ಹಾಗೂ ಸಾಕಷ್ಟು ಪ್ರಯಾಣಿಕರಿದ್ದರೂ ಬಸ್‌ನ ವ್ಯವಸ್ಥೆ ಮಾತ್ರ ಇಲ್ಲದಿರುವುದು ನೋಡಿದರೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ ಎಂದರು.

ಸರ್ಕಾರ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್ ಉಚಿತ ಪ್ರಯಾಣದ ಯೋಜನೆ ಜಾರಿಗೆ ತಂದಿದೆ. ಆದರೆ, ಈ ಭಾಗದ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಈ ಶಕ್ತಿ ಯೋಜನೆ ಉಪಯೋಗವಾಗುತ್ತಿಲ್ಲ. ಶಕ್ತಿ ಯೋಜನೆ ನಮಗೆ ಬೇಡ. ನಾವು ಬಸ್ಸಿನಲ್ಲಿ ಹಣ ನೀಡಿ ಟಿಕೆಟ್ ಪಡೆದು ಸಂಚರಿಸುತ್ತೇವೆ. ನಮ್ಮ ಗ್ರಾಮಕ್ಕೊಂದು ಬಸ್ ವ್ಯವಸ್ಥೆ ಕಲ್ಪಿಸಿಕೊಟ್ಟರೆ ಸಾಕು. ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಿ ಎಂದು ಆಗ್ರಹಿಸಿದರು.

ನಿತ್ಯ ವಿದ್ಯಾಭ್ಯಾಸಕ್ಕೆಂದು ತೆರಳುವ ನೂರಾರು ವಿದ್ಯಾರ್ಥಿಗಳು, ಕೆಲಸ ಕಾರ್ಯಕ್ಕೆಂದು ತೆರಳುವ ರೈತರು, ಚಿಕಿತ್ಸೆಗೆ ತೆರಳುವ ರೋಗಿಗಳು, ವೃದ್ಧರು ಸೇರಿ ಈ ಭಾಗದ ವಿವಿಧ ಗ್ರಾಮಗಳ ಸಾರ್ವಜನಿಕರು ನಗರ ಪ್ರದೇಶಕ್ಕೆ ಹೋಗಿ ಬರಲು ಹರಸಾಹಸಪಡುವಂತಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.

### ಜೀವ ಭಯದಲ್ಲೇ ಓಡಾಟ

ನೂರಾರು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪ್ರತಿನಿತ್ಯ ಪಟ್ಟಣಕ್ಕೆ



ತೆರಳಲು ಸುಮಾರು 3 ಕಿ.ಮೀ. ದೂರ ನಡೆದು ಮಳೆ, ಬಿಸಿಲೆನ್ನದೆ ಹಲವು ಸಮಸ್ಯೆಯ ನಡುವೆಯೇ ಜೀವ ಭಯದಲ್ಲಿ ನಡೆದುಕೊಂಡು ಹೋಗಿ ಬಸ್ ಹತ್ತಿ ಬೇರೆ ಬೇರೆ ಊರುಗಳಿಗೆ ಹೋಗಿ ಬರುವಂತಾಗಿದೆ. ಆಟೋ ಅಥವಾ ಗೂಡ್ಸ್ ವಾಹನಗಳಲ್ಲಿ ಕೂಲಿ ಕಾರ್ಮಿಕರೊಂದಿಗೆ ತೆರಳಬೇಕು. ನಿತ್ಯ ಖಾಸಗಿ ವಾಹನದಲ್ಲಿ ಪ್ರಯಾಣಿಸಲು ಹಣ ಕೊಡಲು ಸಾಧ್ಯವಾಗದ ವಿದ್ಯಾರ್ಥಿಗಳು 3 ಕಿ.ಮೀ. ದೂರ ನಡೆದು ಹೋಗುವುದರಿಂದ ಸರಿಯಾದ ಸಮಯಕ್ಕೆ ಶಾಲಾ, ಕಾಲೇಜುಗಳಿಗೆ ಹೋಗಲು ಆಗುತ್ತಿಲ್ಲ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.

### ಶಾಲೆ ತೊರೆಯುತ್ತಿರುವ ಮಕ್ಕಳು

ನೀಲಗಿರಿ ಕಾವಲು ಗ್ರಾಮದಿಂದ ಪಟ್ಟಣಕ್ಕೆ ತರೆಳಲು 3 ಕಿ.ಮೀ ನಡೆಯಬೇಕು. ಇಲ್ಲಿ ನಿರ್ಜನ ಪ್ರದೇಶ ದಿಂದ ಕೂಡಿದೆ. ಇಲ್ಲಿ ಹೆಚ್ಚು ವಾಹನಗಳು ಓಡಾಡದ ಕಾರಣ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಆತಂಕದಲ್ಲೆ ನಡೆದುಕೊಂಡು ಹೋಗುವಂತಾಗಿದೆ. ಹೀಗಾಗಿ ಹೆಣ್ಣುಮಕ್ಕಳು ಅರ್ಧಕ್ಕೆ ವಿದ್ಯಾಭ್ಯಾಸ ಬಿಟ್ಟು, ಶಾಲಾ-ಕಾಲೇಜುಗಳಿಂದ ಹೊರಗುಳಿಯುತ್ತಿರುವ ಘಟನೆಗಳು ನಡೆಯುತ್ತಿವೆ. ಇದರಿಂದಾಗಿ ಹೆಣ್ಣುಮಕ್ಕಳು ಮನೆಯಲ್ಲೂ ಸುಮ್ಮನೆ ಕುಳಿತಿರುವ ಬದಲು ಇತರರೊಂದಿಗೆ ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯಲು ತೆರಳುತ್ತಿದ್ದಾರೆ. ಜನಪ್ರತಿನಿಧಿಗಳು ಹಾಗೂ ಸಂಬಧಿಸಿದ ಅಧಿಕಾರಿಗಳು ಈ ಸಮಸ್ಯೆ ನಿವಾರಿಸಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಮುಂದಾಗಬೇಕು ಎಂಬುದು ಈ ಭಾಗದ ನಾಗರಿಕರ ಆಗ್ರಹವಾಗಿದೆ.

ನೀಲಗಿರಿ ಕಾವಲು ಗ್ರಾಮಕ್ಕೆ ಬಸ್ ಬಾರದ ಕಾರಣ ಹೆಣ್ಣುಮಕ್ಕಳು ಶಾಲಾ-ಕಾಲೇಜುಗಳಿಗೆ ಹೋಗಲು ಸಮಸ್ಯೆಯಾಗಿ ವಿದ್ಯಾಭ್ಯಾಸ ಮೊಟಕುಗೊಳಿಸಿ, ಸ್ಥಳೀಯ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳು ಈ ಗ್ರಾಮಕ್ಕೆ ಬಸ್‌ನ ವ್ಯವಸ್ಥೆ ಮಾಡುವ ಮೂಲಕ ಹೆಣ್ಣುಮಕ್ಕಳ ವಿದ್ಯಾಭ್ಯಾಸದ



ಕನಸು-ನನಸು ಮಾಡಲು ಮುಂದಾಗಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮುಖಂಡರಾದ ಶಿವಣ್ಣ, ಸ್ವಾಮಿ ಹಾಗೂ ಜಯ, ಭಾರವಿ, ಸುಮಿತ್ರಾ, ಕಾವ್ಯ, ಪುಷ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹಾಸನ ರೆಡ್ ಕ್ರಾಸ್ ರಾಜ್ಯಕ್ಕೆ ಮಾದರಿ: ಲತಾಕುಮಾರಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವರ್ಷಕ್ಕೆ 60 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಹಾಸನ ರೆಡ್ ಕ್ರಾಸ್ ಸಂಸ್ಥೆ ರಾಜ್ಯಕ್ಕೆ ಮಾದರಿಯಾಗಿದೆಯೆಂದು ಜಿಲ್ಲಾ ರೆಡ್ ಕ್ರಾಸ್ ಅಧ್ಯಕ್ಷೆ ಕೆ.ಎಸ್. ಲತಾಕುಮಾರಿ ಹೇಳಿದರು.

ನಗರದ ಸಾಲಗಾಮೆ ರಸ್ತೆಯಲ್ಲಿರುವ ಭಾರತೀಯ ರೆಡ್ ಕ್ರಾಸ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿ, ಹಾಸನ ರೆಡ್ ಕ್ರಾಸ್ 2024ರ ಏಪ್ರಿಲ್‌ನಿಂದ 2025ರ ಮಾರ್ಚ್ ವರೆಗೆ 60 ಕಾರ್ಯಕ್ರಮ ನಡೆಸಿರುವುದು ಶ್ಲಾಘನೀಯ. ನಾನು ಸಾಕಷ್ಟು ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇನೆ. ಆದರೆ ರೆಡ್ ಕ್ರಾಸ್ ಘಟಕ ಇಷ್ಟೊಂದು ಕ್ರಿಯಾಶೀಲವಾಗಿರುವುದನ್ನು ನೋಡಿಲ್ಲವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಡಳಿತದಿಂದ ಪ್ರತಿ ತಿಂಗಳು ಎರಡು ಬಾರಿ ರಸ್ತೆ ಸುರಕ್ಷತಾ ಕಾರ್ಯಕ್ರಮ ಮಾಡುತ್ತೇವೆ. ಈ ನಿಟ್ಟಿನಲ್ಲಿ ರೆಡ್ ಕ್ರಾಸ್ ಪದಾಧಿಕಾರಿಗಳು ನೀಡಿದ ಸಲಹೆಗಳು ನಮಗೆ ನೆರವಾಗಿವೆ. ಶಾಲಾ- ಕಾಲೇಜುಗಳಲ್ಲಿ ರಕ್ತದಾನದ ಅರಿವು ಮೂಡಿಸುವುದು. ಅಪಘಾತ ತಡೆಗಟ್ಟುವಿಕೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುಳಿತು ಉತ್ತಮ ಸಲಹೆ ನೀಡಿದ್ದಾರೆ. ರೆಡ್ ಕ್ರಾಸ್ ಇಷ್ಟೆಲ್ಲಾ ಕ್ರಿಯಾಶೀಲವಾಗಿರಲು ಇಲ್ಲಿನ ಪ್ರತಿ ಸದಸ್ಯರ ಕೊಡುಗೆ ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿ ಒಳ್ಳೆಯ ಕೆಲಸ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿದರು. ಅಂಗವಿಕಲರಿಗೆ ಮೂರು ಚಕ್ರದ ವಾಹನಗಳ ವಿತರಿಸಲಾಯಿತು. ರೆಡ್ ಕ್ರಾಸ್ ನಿರ್ದೇಶಕರು ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಯಿತು.

ರೆಡ್ ಕ್ರಾಸ್ ಸಭಾಪತಿ ಹೆಚ್.ಪಿ. ಮೋಹನ್, ನಿರ್ದೇಶಕರಾದ ಎಸ್.ಎಸ್. ಪಾಷಾ, ಅಮ್ಜದ್ ಖಾನ್, ಬಿ.ಆರ್. ಉದಯಕುಮಾರ್, ಕೆ.ಟಿ.ಜಯಶ್ರೀ, ಡಾ. ಎ. ಸಾವಿತ್ರಿ, ಡಾ. ಭಾರತೀ ರಾಜಶೇಖರ್, ಡಾ. ರಂಗಲಕ್ಷ್ಮಿ, ಡಾ. ಅಬ್ದುಲ್ ಬಷೀರ್, ಕುಮಾರ್ ಇತರರಿದ್ದರು.

# ಗಾಯಕ ಬಾಬು ನಿಧನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಮ್ಮ ಊರು ಹಾಸನ-ಶಿಲ್ಪಕಲೆಯ ಶಾಸನ ಎಂಬ ಗಾಯನದ ಮೂಲಕ ಮನೆ ಮಾತಾಗಿದ್ದ ಗಾಯಕ ಬಾಬು (70) ಅವರು ರಾತ್ರಿ ನಿಧನರಾದರು.

ಕಳೆದ ಹಲವು ವರ್ಷಗಳಿಂದ ಬೆಂಗಳೂರಿನ ತಮ್ಮ ಮಗನ ಮನೆಯಲ್ಲೇ ವಿಶ್ರಾಂತ ಜೀವನ ನಡೆಸುತ್ತಿದ್ದರು. ಮೃತರು ಪತ್ನಿ ಸುಜಾತ, ಮಗ ಆರ್. ಭಾರದ್ವಾಜ್ ಮತ್ತು ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ನಾಗರಬಾವಿಯ ಹಿಂದು ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿತು.

ನಮ್ಮ ಊರು ಹಾಸನ ಶಿಲ್ಪ ಕಲೆಯ ಶಾಸನ ಎಂಬ ಹಾಡಿನ ಮೂಲಕ ಜಿಲ್ಲೆಯ ವೈಶಿಷ್ಟ್ಯಗಳನ್ನು ಹಾಡಿ ಹೋಗಳುತ್ತಿದ್ದ ಕಲಾವಿದ ಬಾಬು ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ನಾಯಕರಹಳ್ಳಿ ಮಂಜೇಗೌಡ, ಗೌರವಾಧ್ಯಕ್ಷ ರವಿ ನಾಕಲಗೂಡು, ಕಲ್ಲಹಳ್ಳಿ ಹರೀಶ್, ಕತ್ತಿಮಲ್ಲೇನಹಳ್ಳಿ ಪರಮೇಶ, ಹರಳಹಳ್ಳಿ ರಂಗಸ್ವಾಮಿ, ಸೋಮನಾಯಕ್, ದಿಬ್ಬೂರು ರಮೇಶ್, ಪುಟ್ಟಣ್ಣ ನಂದಕುಮಾರ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ, ನಾಯಕರಹಳ್ಳಿ, ಉಪಾಧ್ಯಕ್ಷ ಗುಡುಗನಹಳ್ಳಿ ಮಂಜುನಾಥ ಸಂತಾಪ ಸೂಚಿಸಿದ್ದಾರೆ.

# ಮನೆ ಬಾಗಿಲು ಮುರಿದು ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಬಾಣಾವರದಲ್ಲಿ ನಡೆದಿದೆ. ಪಟ್ಟಣ ಪೊಲೀಸ್ ಠಾಣೆ ಹಿಂಭಾಗದ ನಿವಾಸಿ ಅಜ್ಮಲ್ ಖಾನ್ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ. ಸೆ. 20 ರಂದು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸದಸ್ಯರೆಲ್ಲರೂ ಕಡೂರಿಗೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 40 ಗ್ರಾಂ ತೂಕದ ಚಿನ್ನದ ಲಾಂಗ್ ಚೈನ್, 20 ಗ್ರಾಂ ತೂಕದ ಚಿನ್ನದ ನೆಕ್ಲೆಸ್ ಹಾಗು 2 ಲಕ್ಷ ರೂ. ನಗದು ಕದ್ದಿದ್ದಾರೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಾಲಬಾಧೆಯಿಂದ ರೈತ ಆತ್ಮಹತ್ಯೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಸಾಲಬಾಧೆ ತಾಳಲಾರದೆ ವಿಷ ಸೇವಿಸಿ ರೈತ ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಗಂಗೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೆಂಚಯ್ಯ (75) ಮೃತರು. ಕೃಷಿಗಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 3 ಲಕ್ಷ ರೂ. ಹಾಗು ರಾಮನಾಥಪುರದ ಕೆನರಾ ಬ್ಯಾಂಕ್‌ನಲ್ಲಿ 2 ಲಕ್ಷ ರೂ. ಸಾಲ ಮಾಡಿದ್ದರೆನ್ನಲಾಗಿದೆ. ಸಾಲ ಮರುಪಾವತಿಸುವಂತೆ ಬ್ಯಾಂಕ್‌ಗಳಿಂದ ನೋಟೀಸ್ ನೀಡಿದ್ದರಿಂದ ಜಿಗುಪ್ಸೆಗೊಂಡಿದ್ದ ರೈತ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಶಾಸಕ ಎ. ಮಂಜು, ಗ್ರೇಡ್-2 ತಹಶೀಲ್ದಾರ್ ಸ್ವಾಮಿ ಮೃತರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಧರ್ಮ ಕಾಲಂನಲ್ಲಿ ಬೌದ್ಧ ಎಂದೇ ಬರೆಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸರ್ಕಾರದಿಂದ ನಡೆಸಲಾಗುತ್ತಿರುವ ಜಾತಿ ಗಣತಿಯ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯವರು ಧರ್ಮವನ್ನು ಬೌದ್ಧ, ಜಾತಿಯನ್ನು ಹೊಲೆಯ ಎಂದು ನಮೂದಿಸುವಂತೆ ಪುರಸಭೆ ಮಾಜಿ ಅಧ್ಯಕ್ಷ ಕಾಡಪ್ಪ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ದಿನಾಂಕ ಸೆ. 22 ರಿಂದ ಅ. 7ರ ವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಜನಗಣತಿ ಸಮೀಕ್ಷೆ ನಡೆಯುತ್ತಿದೆ. ಪರಿಶಿಷ್ಟ ಜಾತಿಯವರ ಮನೆಗಳಿಗೆ ಬರುವ ಗಣತಿದಾರರಿಗೆ ತಮ್ಮ ಧರ್ಮವನ್ನು ತಿಳಿಸುವಾಗ ಬೌದ್ಧ ಧರ್ಮ ಎಂದು, ಜಾತಿಯನ್ನು ಹೊಲೆಯ ಎಂದು ನಮೂದಿಸುವಂತೆ ತಾಲ್ಲೂಕಿನ ದಲಿತರಿಗೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ಈ ದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಯವರು ಮೂಲತಃ ಬೌದ್ಧ ವಂಶಸ್ಥರಾಗಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಇತಿಹಾಸ ಅಧ್ಯಯನ ಮಾಡಿ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರು. ಅವರ




ಅನುಯಾಯಿಗಳಾದ ನಾವುಗಳು (ಶೋಷಿತ ಪರಿಶಿಷ್ಟ ಜಾತಿ) ಇಂದು ಅವರು ತೋರಿಸಿದ ಮಾರ್ಗವನ್ನು ಅನುಸರಿಸುವ ಕಾಲ ಬಂದಿದೆ. ಅನೇಕ ವರ್ಷಗಳ ನಂತರ ನಡೆಯುತ್ತಿರುವ ಜನಗಣತಿ ಸಮೀಕ್ಷೆಯ ಸಂದರ್ಭದಲ್ಲಿ ರಾಜ್ಯದ ಪರಿಶಿಷ್ಟ ಜಾತಿಯ ಬುದ್ಧಿಜೀವಿಗಳು, ವಿಚಾರವಾದಿಗಳು ಹಾಗೂ ಸಮುದಾಯದ ಹಿತಚಿಂತಕರು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ತೀರ್ಮಾನ ಮಾಡಿದಂತೆ, ಪರಿಶಿಷ್ಟ ಜಾತಿಗೆ ಸೇರಿದ 101 ಜಾತಿಗಳು ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮ ಎಂದು ಹಾಗೂ ಪರಿಶಿಷ್ಟ ಜಾತಿಗೆ ಸೇರಿಸಿ ಎಂದು ವಿನಂತಿಸಿಕೊಳ್ಳುತ್ತೇನೆ ಎಂದರು.

ನಿವೃತ್ತ ಶಿಕ್ಷಕ ಮತ್ತು ದಲಿತ ಮುಖಂಡ ಲಕ್ಕಪ್ಪ ಮಾತನಾಡಿ, ಸಂವಿಧಾನದಲ್ಲಿ ಪರಿಶಿಷ್ಟ ಜಾತಿಯವರಿಗೆ ಸರ್ಕಾರದ ಸುತ್ತೋಲೆ ಪ್ರಕಾರ 1990 ನಂ.15ರಂತೆ ಬೌದ್ಧ ಧರ್ಮದಲ್ಲಿ ಬರುವ ಪರಿಶಿಷ್ಟ ಜಾತಿಯ 101 ಜಾತಿಗಳಿಗೆ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಮೀಸಲಾತಿ ಹಕ್ಕುಗಳನ್ನು ದೊರಕುವಂತೆ ಬಾಬಾ ಸಾಹೇಬರು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು. ಶತಮಾನಗಳಿಂದ ಶೋಷಿತ ಪರಿಶಿಷ್ಟ ಜಾತಿಗಳು ಇಂದು ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ನೆಮ್ಮದಿ ಬದುಕನ್ನು ನಡೆಸುತ್ತಿದ್ದಾರೆ. ಸರ್ಕಾರದಿಂದ ನಡೆಯುತ್ತಿರುವ ಜಾತಿಗಣತಿಯ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯವರು ಧರ್ಮವನ್ನು ಬೌದ್ಧ ಎಂದು, ಜಾತಿಯನ್ನು ಹೊಲೆಯ ಎಂದು ನಮೂದಿಸಬೇಕಾಗಿದೆ. ನಮ್ಮ ಮೇಲೆ ನಂಬಿಕೆ ಇಟ್ಟು ಹಕ್ಕುಗಳನ್ನು ನೀಡಿದ ಬಾಬಾ ಸಾಹೇಬರ ವಿಶ್ವಾಸವನ್ನು ಉಳಿಸುವುದರ ಜೊತೆಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿ. ಆದ್ದರಿಂದ ಈ ಭಾಗದ ಪರಿಶಿಷ್ಟ ಜಾತಿಯ ಕುಲಬಂಧುಗಳು ಗಣತಿದಾರರಿಗೆ ಸಮೀಕ್ಷೆಯ ಧರ್ಮದ ಕಾಲಂ 8ರ ಕ್ರಮ ಸಂಖ್ಯೆ 6ರಲ್ಲಿ ಬೌದ್ಧ ಎಂದು ಬರೆಸಬೇಕು. ಕಾಲಂ 9ರಲ್ಲಿ ತಮ್ಮ ಉಪಜಾತಿಯನ್ನು ಹೊಲೆಯ ಎಂದು ನಮೂದಿಸಬೇಕು. ಬೌದ್ಧ ಧರ್ಮದ ಅನುಯಾಯಿಗಳು ಜಾತಿ ಕಾಲಂ 9ರಲ್ಲೂ ಬೌದ್ಧ ಎಂದು ನಮೂದಿಸಬೇಕು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕುಮಾರಯ್ಯ, ನಲ್ಲುಲಿ ಈರಪ್ಪ, ಪರ್ವತಯ್ಯ, ಲಕ್ಕಪ್ಪ, ಜಯವರ್ಧನ್ ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-24

1493: ಕ್ರಿಸ್ಟೋಫರ್ ಕೊಲಂಬಸ್ ತನ್ನ ಎರಡನೇ ಸಮುದ್ರಯಾನಕ್ಕೆ ಸ್ಪೇನ್‌ನಿಂದ ಹೊರಟನು.

1852 ಫ್ರೆಂಚ್ ವಿಜ್ಞಾನಿ ಹೈನ್ರಿ ಗಿಫ್ಫಾರ್ಡ್ ತನ್ನ ಸ್ಟೀಮ್ ಎಂಜಿನ್ ಬಲೂನ್ ಮೂಲಕ ಮೊದಲ ನಿಯಂತ್ರಿತ ವಿಮಾನಯಾನ ನಡೆಸಿದರು.

1948: ಹೊಂಡುರಾಸ್ ಮತ್ತು ನಿಕಾರಾಗುವಾ ನಡುವೆ ಯುದ್ಧ ಪ್ರಾರಂಭವಾಯಿತು.

1957: ಬಾರ್ಸಿಲೋನಾದ ಪ್ರಸಿದ್ಧ ಫುಟ್‌ಬಾಲ್ ಕ್ರೀಡಾಂಗಣ ಉದ್ಘಾಟನೆಗೊಂಡಿತು.

1960: ಅಮೆರಿಕಾದ ಮೊದಲ ಪರಮಾಣು ಶಕ್ತಿ ಹೊಂದಿದ ಏರ್ ಕ್ರಾಫ್ಟ್ ಕ್ಯಾರಿಯರ್ ಸಮುದ್ರ ಪ್ರವೇಶಿಸಿತು.

1979: ಘಾನಾದ ಮಾಜಿ ಅಧ್ಯಕ್ಷ ಕ್ವಾಮೆ ನಕ್ರುಮಾ ಅವರನ್ನು ಮರಣೋತ್ತರವಾಗಿ ರಾಷ್ಟ್ರಪತಿಗಳಾಗಿ ಘೋಷಿಸಲಾಯಿತು.

1990: ಜರ್ಮನಿಯ ಪೂರ್ವ ಹಾಗೂ ಪಶ್ಚಿಮ ಸಂಸತ್ತಿನಲ್ಲಿ ಏಕೀಕರಣ ಒಪ್ಪಂದವನ್ನು ಅಂಗೀಕರಿಸಲಾಯಿತು.

1726: ಬಾಂಬೆ (ಇಂದಿನ ಮುಂಬೈ), ಮದ್ರಾಸ್ (ಚೆನ್ನೈ) ಮತ್ತು ಕಲ್ಕತ್ತಾ (ಕೊಲ್ಕತ್ತಾ) ನಗರಗಳಿಗೆ ಮೇಯರ್ ಕೋರ್ಟ್ ಸ್ಥಾಪನೆ.

1904: ಅಂಧರಿಗೆ ಶಿಕ್ಷಣ ನೀಡಿದ ಲೂಯಿಸ್ ಬ್ರೈಲ್ ಲಿಪಿ ಮೊದಲ ಬಾರಿಗೆ ಭಾರತದಲ್ಲಿ ಪರಿಚಯಿಸಲಾಯಿತು.

1920: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಖಿಲ ಭಾರತೀಯ ವಿಶೇಷ ಅಧಿವೇಶನ (ಕಲ್ಕತ್ತಾ) ನಲ್ಲಿ ಅಸಹಕಾರ ಚಳವಳಿಗೆ ಅನುಮೋದನೆ.

1971: ನಾಸಾದ ಅಪೋಲೋ15 ಯಾತ್ರಿಕ ಡೇವಿಡ್ ಸ್ಕಾಟ್ ಭಾರತಕ್ಕೆ ಆಗಮಿಸಿದರು.

### ಜನನ

1896: ಎಫ್.ಎಸ್. ನಾಯಪಾಲ್, ಭಾರತೀಯ ಮೂಲದ ಸಾಹಿತ್ಯಿಕ ವ್ಯಕ್ತಿ

1898: ಹಾವರ್ಡ್ ಫ್ಲೋರೆ, ಪೆನಿಸಿಲಿನ್ ಔಷಧಿಯ ಕಂಡುಹಿಡಿಯುವಲ್ಲಿ ಪ್ರಮುಖ ವಿಜ್ಞಾನಿ

1902: ಅಯ್ಲಾ ವರ್ಡೆ, ಬ್ರೆಜಿಲಿಯನ್ ಸಂಗೀತಗಾರ್ತಿ

1934: ಮನ್‌ಮೋಹನ್ ಸಿಂಗ್, ಭಾರತದ ಮಾಜಿ ಪ್ರಧಾನಮಂತ್ರಿ

### ಮರಣ

1180: ಫ್ರಾನ್ಸ್‌ನ ರಾಜ ಲೂಯಿಸ್

1991: ಡಾ. ಸೀತಾರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ

# ಭಯಪಡಿಸುವವರಿಂದ ಎಚ್ಚರಿಕೆ ವಹಿಸಿ: ಮಹಮ್ಮದ್ ಕುಂಞ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ನಮ್ಮನ್ನು ಭಯಪಡಿಸುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಆರೋಗ್ಯಕ್ಕಾಗಿ ಆಸ್ಪತ್ರೆಗೆ ಹೋಗಲು ಭಯ, ನ್ಯಾಯಕ್ಕಾಗಿ ವಕೀಲರನ್ನು ಸಂಪರ್ಕಿಸಲು ಭಯ, ರಾಜಕಾರಣಿಗಳ ಬಲವನ್ನು ಎದುರಿಸಲು ಭಯ, ಧಾರ್ಮಿಕ ಸಭೆಗಳಲ್ಲಿ ಧರ್ಮ ಗುರುಗಳ ಭಯ ಎಲ್ಲಾ ದಿಕ್ಕಿನಿಂದ ಭಯ ಆವರಿಸಿದೆ ಎಂದು ಶಾಂತಿ ಪ್ರಕಾಶನ ವ್ಯವಸ್ಥಾಪಕ ಜನಾಬ್ ಮಹಮ್ಮದ್ ಕುಂಞ ತಿಳಿಸಿದರು.

ತಾಲ್ಲೂಕಿನ ಅರೇಹಳ್ಳಿ ಪಟ್ಟಣದ ಮುಖ್ಯ ರಸ್ತೆಯ ಹೀರಾ ಸೆಂಟರ್‌ನಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಹಮ್ಮಿಕೊಂಡಿದ್ದ ಪ್ರವಾದಿ ಮಹಮ್ಮದ್ (ಸ) ಸೀರತ್ ಅಭಿಯಾನ ಸಮಾವೇಶದಲ್ಲಿ ಮಾತನಾಡಿ, ಇತಿಹಾಸದಲ್ಲಿ ಮಹಾನ್ ಪುರುಷರು, ಸಂತರು, ಪ್ರವಾದಿಗಳು, ಆಚಾರ್ಯರು ಜನ್ಮ ತಾಳಿ ಭರವಸೆಯ ಜೀವನದ ಪಾಠಗಳನ್ನು ನೀಡಿದ್ದಾರೆ. ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಮಾತ್ರ ನಿರ್ಭಯವಾಗಿ ಬದುಕಲು ಸಾಧ್ಯವೆಂದು ತಿಳಿಸಿದರು.

ಸಮಾಜದ ಬಡವರಿಂದ ಹಿಡಿದು ಶ್ರೀಮಂತರವರೆಗೆ ಎಲ್ಲರ ಪಾಲಿಗೆ ಅತ್ಯಂತ ಭರವಸೆ ಎಂದರೆ ನ್ಯಾಯ. ನ್ಯಾಯವಿಲ್ಲದಿದ್ದರೆ ಅರಾಜಕತೆ ಸೃಷ್ಟಿಯಾಗುತ್ತದೆ. ಅದಕ್ಕಾಗಿ



ಪ್ರವಾದಿಗಳು ನ್ಯಾಯಕ್ಕೆ ಅತೀವ ಮಹತ್ವ ಕೊಟ್ಟಿದ್ದಾರೆ. ಇಂದಿನ ಕಾಲದಲ್ಲಿ ನಗರ-ಗ್ರಾಮ, ದೇಶ-ವಿದೇಶಗಳ ನಡುವಿನ ಅಂತರ ಕಡಿಮೆಯಾಗಿದ್ದರೂ, ಮನುಷ್ಯ-ಮನುಷ್ಯರ ನಡುವಿನ ಅಂತರ ಮಾತ್ರ ಹೆಚ್ಚುತ್ತಿರುವುದು ಬೇಸರದ ಸಂಗತಿ. ಸಾಮರಸ್ಯ ಮತ್ತು ಸಹೋದರತ್ವದಿಂದ ಬದುಕಲು ಜನಜಾಗೃತಿಯ ಸಮಾವೇಶಗಳಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದರು.

ಪಿಎಸ್‌ಐ ಶೋಭಾ ಭರಮಣ್ಣವರ ಮಾತನಾಡಿ, ಸಾಮರಸ್ಯ ಮತ್ತು ಸಹಬಾಳ್ವೆಯ ಸಂದೇಶಗಳನ್ನು ಮಕ್ಕಳಿಗೆ ಹಂಚಿದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಆಧುನಿಕ ತಂತ್ರಜ್ಞಾನ ಬೆಳೆದಂತೆ ಕಾನೂನಿನ ಅರಿವು ಕುಂದುತ್ತಿದೆ. ನ್ಯಾಯದ ಅರಿವು ಇದ್ದರೆ ಸಮಾಜದಲ್ಲಿ ಅಹಿತಕರ ಘಟನೆಗಳು ಸಂಭವಿಸುವುದಿಲ್ಲ. ಹಿಂದೆ ಒಂದು ಕುಟುಂಬದಲ್ಲಿ ಹತ್ತಾರು ಜನರು ಸಾಮರಸ್ಯದಿಂದ ಬದುಕುತ್ತಿದ್ದರು. ಈಗ ಮನೆಮನೆಗಳಲ್ಲಿ ಕಲಹ ಹೆಚ್ಚಾಗಿದೆ. ಆದ್ದರಿಂದ ಇಂತಹ ಸಮಾವೇಶಗಳಲ್ಲಿ ಭಾಗವಹಿಸಿ ಬಾಂಧವ್ಯದಿಂದ ಬದುಕುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ಕಾರ್ಯದರ್ಶಿ ಮುಜೀಬ್ ಉರ್ ರಹಮಾನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮುದಾಯ ಆರೋಗ್ಯ ಕೇಂದ್ರಕ್ಕೆ ಇತ್ತೀಚೆಗೆ ವೈದ್ಯಾಧಿಕಾರಿಗಳಾಗಿ ಆಗಮಿಸಿದ ಡಾ.ಅಕ್ಷತ್ ಶೆಟ್ಟಿ ಹಾಗೂ ಡಾ.ರಬಿಯಾ ರಹಮಾನ್ ಅವರನ್ನು ಸನ್ಮಾನಿಸಲಾಯಿತು.

ಜಮಾಅತೆ ಅಧ್ಯಕ್ಷ ಇರ್ಷಾರ್ ಅಸರ್ ಉಮ್ರಿ, ಕಾಲೇಜು ಉಪಪ್ರಾಂಶುಪಾಲ ಶಿವಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷೆ ರಶ್ಮಿ ಸೋಮಯ್ಯ, ಜಾಮಿಯ ಮಸ್ಜಿದ್ ಕಮಿಟಿ ಕಾರ್ಯದರ್ಶಿ ಹಾಮೀದ್ ಅಂಜುಮ್, ಕಾಫಿ ಬೆಳೆಗಾರರ ಸಂಘ ಅಧ್ಯಕ್ಷ ಶಾರಿಬ್ ಫರ್ಹಾನ್, ರೋಟರಿ ಅಧ್ಯಕ್ಷ ಪ್ರಸನ್ನ ಉಪಸ್ಥಿತರಿದ್ದರು.

# ಜಿಎಸ್‌ಟಿ ಹೊರೆ ಇಳಿಕೆಯಿಂದ ಸಾಮಾನ್ಯರಿಗೆ ಅನುಕೂಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೇಂದ್ರ ಸರ್ಕಾರ ಜಿಎಸ್‌ಟಿ ದರ ಇಳಿಕೆ ಮಾಡುವ ಮೂಲಕ ರಾಷ್ಟ್ರದ ಜನತೆಗೆ ಭರ್ಜರಿ ಉಡುಗೊರೆ ನೀಡಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ನಾಲ್ಕು ಶ್ರೇಣಿಯ ಜಟಿಲ ಜಿಎಸ್‌ಟಿ ವ್ಯವಸ್ಥೆ (ಶೇ.5, 12, 18, 28) ಬದಲಾಗಿ ಸರಳವಾದ ಕೇವಲ 2 ಶ್ರೇಣಿ (ಶೇ.5, 18) ವ್ಯವಸ್ಥೆ ಜಾರಿ ಮಾಡಲಾಗಿದೆ. ಶೇ.12 ದರದಲ್ಲಿದ್ದ ಶೇ.99 ರಷ್ಟು ಸರಕು ಮತ್ತು ಸೇವೆಗಳ ದರದಲ್ಲಿ ಭಾರೀ ಕಡಿತವಾಗಿದೆ. ಶೇ.28 ರಷ್ಟಿದ್ದ ಜಿಎಸ್‌ಟಿ ದರದಲ್ಲಿ ಶೇ.90 ರಷ್ಟು ದರ ಕಡಿತವಾಗಿದೆ ಎಂದು ತಿಳಿಸಿದರು.

ಒಂದು ದೇಶ, ಒಂದು ತೆರಿಗೆ ವ್ಯವಸ್ಥೆಯಿಂದ ದೇಶದ ಆರ್ಥಿಕ ದೃಷ್ಟಿಕೋನ ಬದಲಾಗಿದೆ. ಎಲ್ಲಾ ರಾಜ್ಯಗಳ ಸರ್ವಾನುಮತದಿಂದ ಜಾರಿಗೆ ತಂದ ಜಿಎಸ್‌ಟಿಯಿಂದ ಭಾರತದ ಆರ್ಥಿಕತೆಯನ್ನು ನೆಲಮಟ್ಟದಿಂದ ಬಲಪಡಿಸಲಾಗುತ್ತಿದೆ. ತೆರಿಗೆ ಇಳಿಕೆಯಿಂದ ಗ್ರಾಹಕರಿಂದ ಖರೀದಿ, ಬೇಡಿಕೆ ಮತ್ತು ಉತ್ಪಾದನೆಯಲ್ಲಿ ಏರಿಕೆಯಾಗಲಿದೆ. ಉದ್ಯೋಗವೂ ಹೆಚ್ಚಾಗಲಿದೆ ಎಂದರು.




ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಯುಪಿಎ ಸರ್ಕಾರದಿಂದ ನೆಲ ಕಚ್ಚಿದ್ದ ದೇಶದ ಆರ್ಥಿಕತೆಯನ್ನು ಒಂದು ದಶಕದ ಪರಿಶ್ರಮದಿಂದ ಭಾರತದ ಆರ್ಥಿಕತೆ ಪುನರುತ್ಥಾನಗೊಂಡಿದೆ. 2017ರಲ್ಲಿ 65 ಲಕ್ಷ ತೆರಿಗೆದಾರರಿದ್ದರು. ಈಗ 1.51 ಕೋಟಿಗೆ ತಲುಪಿದೆ. 2018ರ ಆರ್ಥಿಕ ವರ್ಷದಲ್ಲಿ 7.19 ಲಕ್ಷ ಕೋಟಿರೂ. ತೆರಿಗೆ ಸಂಗ್ರಹವಾಗಿತ್ತು. 2025ರಲ್ಲಿ 22.08 ಲಕ್ಷ ಕೋಟಿರೂಗೆ ತಲುಪಿದೆ ಎಂದು ಹೇಳಿದರು.

ಹಾಲು, ಡೇರಿ ಅಗತ್ಯ ವಸ್ತುಗಳು ಜಿಎಸ್‌ಟಿಯಿಂದ ಮುಕ್ತವಾಗಿವೆ. ದಿನಸಿ ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇ.12 ರಿಂದ 5ಕ್ಕೆ ಇಳಿಸಲಾಗಿದೆ. ಕಾರು, ಫ್ರಿಡ್ಜ್, ಎಸಿ ಮೇಲಿನ ತೆರಿಗೆಯನ್ನು ಶೇ.28ರಿಂದ 18ಕ್ಕೆ ಇಳಿಸಲಾಗಿದೆ. ರೈತರಿಗೆ ನೆರವು ನೀಡುವ ನಿಟ್ಟಿನಲ್ಲಿ ಟ್ರ್ಯಾಕ್ಟರ್, ಹನಿ ನೀರಾವರಿ, ಸ್ಪ್ರಿಂಕ್ಲರ್, ಕೊಯ್ಲು ಮಾಡುವ ಯಂತ್ರಗಳ ಮೇಲಿನ ಜಿಎಸ್‌ಟಿಯನ್ನು ಶೇ.5ಕ್ಕೆ ಇಳಿಸಲಾಗಿದೆ. ವೈದ್ಯಕೀಯ ಮೇಲಿನ ತೆರಿಗೆಯನ್ನು ಶೂನ್ಯಕ್ಕೆ ಇಳಿಸಲಾಗಿದೆ. ಆರೋಗ್ಯ ವಿಮೆ ಮತ್ತು ಜೀವವಿಮೆಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ. 33 ಜೀವ ಉಳಿಸುವ ಔಷಧಿಗಳ ಮೇಲಿನ ಜಿಎಸ್‌ಟಿಯನ್ನು ಶೇ.12ರಿಂದ ಶೂನ್ಯಕ್ಕೆ ಇಳಿಸಲಾಗಿದೆ ಎಂದು ತಿಳಿಸಿದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮುಖಂಡರಾದ ಚಂದ್ರು, ಚೇತನ್ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248